



# ವಿಶಿಷ್ಟ ಕಲೆ ಜಾನೂರ್

■ ಆರ್. ಸವಿತ

ಜಾನೂರ್ ಎನ್ನುವುದು ಇಂಡೋನೇಷ್ಯಾ ಭಾಷೆಯ ಪದ; ಜಾನೂರ್ ಎಂದರೆ ಎಳೆಯ ತೆಂಗಿನ ಗರಿಗಳು ಎಂದರ್ಥ. ಫಲ ಪುಷ್ಪಗಳು ಮತ್ತು ಎಳೆಯ ತಿಳಿಹಳದಿ ಬಣ್ಣದ ತೆಂಗಿನ ಗರಿಗಳ ಕಲಾತ್ಮಕ ಜೋಡಣೆಯ ಕಲೆಯನ್ನು ಜಾನೂರ್ ಕಲೆ ಎನ್ನುವುದು ರೂಢಿ. ಇಂಡೋನೇಷ್ಯಾದಲ್ಲಿ ಹಬ್ಬಗಳ ಸಮಯದಲ್ಲಿ ಈ ಜೋಡಣೆ ಜನಪ್ರಿಯ. ಸುಮಾರು 6ರಿಂದ 8 ಅಡಿಗಳ ಎತ್ತರದವರೆಗೂ ವಿವಿಧ ವಿನ್ಯಾಸ, ವಿವಿಧ ಅಳತೆಗಳಲ್ಲಿ ಇದನ್ನು ರಚಿಸುತ್ತಾರೆ.

ಜಾನೂರ್ ಕಲೆ ಭಾರತದಲ್ಲೂ ಪರಿಚಯವಾಗಿ ಬಹಳ ವರ್ಷಗಳಾದವು. ನಮ್ಮಲ್ಲಿ ತೆಂಗಿನ ಹಸಿರು ಗರಿಗಳನ್ನು ಹಬ್ಬ ಮತ್ತಿತರ ಸಮಾರಂಭಗಳಲ್ಲಿ ಬಳಸುತ್ತಾರೆ. ಈ ಎಳೆಯ ಗರಿಗಳಿಂದ ಜಾರು ತೋರಣಗಳಂತೆ ಮದುವೆ ಮಂಟಪಗಳನ್ನು ಅಲಂಕರಿಸುತ್ತಾರೆ.

ಜಾನೂರ್ ಕಲೆ ಸಮಾರಂಭದಲ್ಲಿ ದೀಪ ಹಚ್ಚುವ ಕಾರ್ಯಕ್ರಮ, ಸಾರ್ವಜನಿಕ ಹಾಗೂ ಪೂಜಾ ಸಮಾರಂಭ, ಧಾರ್ಮಿಕ ಸಮಾರಂಭಗಳಲ್ಲೂ ಬಳಕೆಯಲ್ಲಿದೆ. ಊಟದ ಮೇಜಿನ ಮೇಲೆ ಈ ಜಾನೂರ್ ಅನ್ನು ಹಣ್ಣುಗಳಿಂದ ಅಲಂಕರಿಸಿ ಪ್ರದರ್ಶಿಸುವುದೂ ಇದೆ.

ಜಾನೂರ್ ತಯಾರಿಗೆ ಹೊಂದಾಣಿಕೆಯ ಜೋಡಣೆಯ ಅಗತ್ಯವಿದೆ. ಇದರಲ್ಲೂ ಕ್ರಮ ಸಂಖ್ಯೆ ಜೋಡಣೆ ಮುಖ್ಯ. ಇದನ್ನು ತಯಾರಿಸಲು 2–3 ಗಂಟೆಗಳ ಸಮಯ ಬೇಕಾಗುತ್ತದೆ. ಕಲ್ಪನೆಗೆ ತಕ್ಕಂತೆ ಕಲಾತ್ಮಕವಾಗಿ ತಯಾರಿಸಿಕೊಳ್ಳಬಹುದು. ಇದರಲ್ಲಿ ದೀಪ ಹೊತ್ತಿರುವ ನವಿಲು ಶಂಖುವಿನ ಆಕಾರ, ಗುಮ್ಮಟಗಳು, ಅರಳಿದ ಕಮಲದಾಕಾರ, ಸುರುಳಿ ಆಕಾರ ಜನಪ್ರಿಯ. ಜೊತೆಗೆ ಮಧ್ಯೆ ಅಲಂಕೃತ ದೀಪಗಳು ಬರುವಂತೆ ಗಣಪತಿಯ ಮುಖಗಳನ್ನೂ ಜೋಡಿಸುವುದಿದೆ. ವಿವಿಧ ಸಮಾರಂಭಗಳಲ್ಲಿ ಗೋಡೆಯ ಹಿನ್ನೆಲೆಗಳನ್ನು ಅಲಂಕರಿಸಲು ನೀಲಿ ಪರದೆಯ ಮೇಲೆ ಹೊಂಬಣ್ಣದ ತೆಂಗಿನ ಗರಿಗಳನ್ನು ವಿವಿಧ ಮಾದರಿಗಳಲ್ಲಿ ಕತ್ತರಿಸಿಕೊಂಡು ಸೂರ್ಯನ ಕಿರಣಗಳಂತೆಯೂ, ಹಕ್ಕಿಗಳು, ಹೂಗಳಂತೆಯೂ ಅಲಂಕರಿಸಬಹುದು.

**ಜಾನೂರ್ ತಯಾರಿಸಲು ಬೇಕಾಗುವ ವಸ್ತುಗಳು:** ಪಾಟ್ ಅಥವಾ ಖಾಲಿ ಟಿನ್. ತಿಳಿ ಹಳದಿ ಬಣ್ಣದ ತೆಂಗಿನ ಗರಿಗಳು, ಒಂದು ಬಾಳೆಯ ದಿಂಡು, ಗುಂಡು ಸೂಜಿಗಳು, ಸ್ಟ್ಯಾಪ್ಲರ್, ಚಾಕು, ಸ್ಟ್ಯಾಪ್ಲರ್ ಪಿನ್, ನಿಟ್ಟಿಂಗ್ ನೀಡಲ್, ಕತ್ತರಿ, ಚಾಕು ಸ್ಟೀಲ್, ಹಸಿರು ಎಲೆ, ಗುಲಾಬಿ ಹೂಗಳು ಮತ್ತು ದೀಪಗಳು.

ಖಾಲೀ ಟಿನ್ ಒಂದನ್ನು ತೆಗೆದುಕೊಂಡು ಟಿನ್‌ನ ಮಧ್ಯ ಭಾಗಕ್ಕೆ ಬಾಳೆದಿಂಡನ್ನು ನಿಲ್ಲಿಸಿ ಹಳದಿ ಹತ್ತಿ ಬಟ್ಟೆಯ ತುಂಡನ್ನು ದಿಂಡಿನ ಸುತ್ತಲೂ ಟಿನ್‌ನ ಒಳಭಾಗಕ್ಕೆ ಬಿಗಿಯಾಗಿ ಒತ್ತಬೇಕು. ಇದು ಟಿನ್‌ನ ಅಂಚಿನವರೆಗೂ ತುಂಬಿ. ಬಾಳೆಯ ದಿಂಡು ಅಲುಗಾಡದಂತೆ ಮಾಡಿ. ಬಳಿಕ ತುಂಬಿದ ಬಟ್ಟೆಯ ಮೇಲೆ ನೀರು ಸುರಿಯಿರಿ. ಇದು ಬಟ್ಟೆ ತೇಗೆಯುವಂತಿರಲಿ. ದಿಂಡು ತಾಜಾ ಆಗಿರಲು ಇದು ಸಹಾಯಕ.

ಶಂಖುವಿನ ಮಾದರಿಯ ಜಾನೂರ್ ಮಾಡಲು ತೆಂಗಿನ ಗರಿಗಳನ್ನು ಮೊದಲು ಊಹಿಸಿಕೊಂಡಿರುವ ಅಳತೆಗೆ ನಾಜೂಕಾಗಿ ಕತ್ತರಿಸಿಕೊಳ್ಳಿ. ನಿಟ್ಟಿಂಗ್ ನೀಡಲ್‌ನಿಂದ ದಿಂಡಿನ ಸುತ್ತಲೂ, ರಂಧ್ರಗಳು ಮಾಡಿ ಕತ್ತರಿಸಿದ ಗರಿಗಳನ್ನು ಚುಚ್ಚಿ ಗರಿಯ ಅಂಚಿಗೆ ಸ್ಟ್ಯಾಪ್ಲರ್‌ನಿಂದ ಪಿನ್ ಮಾಡಿ. ಇದು ಚಕ್ರದಂತೆ ಬಂದಿರುತ್ತದೆ. ಇದರ ಮೇಲೆ 2 ಇಂಚು ಜಾಗ ಬಿಟ್ಟು ಶಂಖುವಿನ ಆಕಾರ ಬರುವಂತೆ ಗರಿಗಳನ್ನು ಚುಚ್ಚಿಕೊಳ್ಳಿ. ಶಂಖು ನಮೂನೆ ಪೂರ್ತಿ ಮಾಡಿ ದಿಂಡಿನ ತುದಿಗೆ ಗರಿಯಿಂದ ಅಲಂಕರಿಸಿ ದಿಂಡಿನ ಒಂದು ಬದಿಯಿಂದ 3 ದೀಪಗಳನ್ನು ಜೋಡಿಸಬೇಕು. ನಂತರ ಅಂಚು ಕತ್ತರಿಸಿದ ಗರಿಯನ್ನು ದಿಂಡಿನ ತುದಿಯಿಂದ ಕೆಳ ಭಾಗದವರೆಗೂ ಬರುವಂತೆ ಎರಡು ಗರಿಗಳನ್ನು ಚುಚ್ಚಬೇಕು. ಬಳಿಕ ಎಲೆ ಮತ್ತು ಗುಲಾಬಿ ಹೂಗಳಿಂದ ಅಲಂಕರಿಸಿ, ದೀಪ ಹಚ್ಚಿ. ಅತ್ಯಂತ ಸುಂದರವಾದ ಶಂಖುವಿನ ಮಾದರಿಯ ಜಾನೂರ್ ಸಿದ್ಧ. ಶಂಖುವಿನ ನಮೂನೆ ಅಲ್ಲದೆ, ಅರಳಿದ ಕಮಲ ಗುಮ್ಮಟಗಳು, ಸುರುಳಿ ಆಕಾರಗಳನ್ನೂ ಕಲ್ಪನೆಗೆ ತಕ್ಕಂತೆ ಗರಿಗಳಿಂದ ಅಲಂಕರಿಸಬಹುದು. ಸಿದ್ಧವಾದ ಜಾನೂರ್ ಮೇಲೆ ಆಗಾಗ ನೀರು ಸಿಂಪಡಿಸುತ್ತಿದ್ದರೆ ತಾಜಾ ಆಗಿರುತ್ತದೆ. ಡಿಸೆಂಬರ್ ತಿಂಗಳಿನಲ್ಲಿ ಹವಾಮಾನಕ್ಕೆ ಅನುಗುಣವಾಗಿ 6–7 ದಿನಗಳವರೆಗೆ ಇದು ತಾಜಾ ಆಗಿರುತ್ತದೆ.